# ಎ ಸ್ಮಾಲ್ ವರ್ಲ್ಡ್

ಸಮುದ್ರ ತೀರಕ್ಕೆ ಹೋಗೋಣ. ಯಾವ ಸಮುದ್ರ ತೀರ ಎನ್ನುವ ಪ್ರಶ್ನೆಯೇ? ಸದ್ಯಕ್ಕೆ ಚೆನ್ನೈ ಹತ್ತಿರವಿರುವುದರಿಂದ ಅಲ್ಲಿಯ ಸಮುದ್ರತೀರ ಎಂದುಕೊಳ್ಳೋಣ. ನವ ಯುವ – ಯುವತಿಯರು ಹೆಚ್ಚಾಗಿ ಹ್ಯಾಂಗ್ ಔಟ್ ಮಾಡುವ ಬೆಸೆಂತ್‌ನಗರದ ಎಲಿಯಟ್ ಬೀಚ್‌ಗೆ ಬನ್ನಿ ಈಗ...

ಎಲ್ಲಪ್ಪಾ ನಾಯಕ ಕಾಣುತ್ತಿಲ್ಲವೆಂಬ ಯೋಚನೆಯೇ? ಓ ಅಲ್ಲಿ, ಸುಮಾರು ಇಪ್ಪತ್ತೈದು, ಇಪ್ಪತ್ತಾರು ವರುಷದ ಒಂಟಿ ಯುವಕನೊಬ್ಬ ಸಮುದ್ರತಡಿಯಲ್ಲಿ ಅನ್ಯಮನಸ್ಕನಾಗಿ ಕುಳಿತಿರುವುದು ಕಾಣಿಸುತ್ತಿದೆಯಲ್ಲಾ, ಅವನೇ ಈ ಕತೆಗೆ ನಾಯಕ.

ನಾಯಕನೆಂದ ಕೂಡಲೇ, ಸರ್ವವೂ ಅವನ ಸುತ್ತವೇ ಉರುಳಿಬಿದ್ದು ನೇಣು ಹಾಕಿಕೊಳ್ಳುವ ಕತೆಯೆಂದು ಸುಲಭವಾಗಿ ಊಹಿಸಿಬಿಟ್ಟಿರಾ? ಛೇ! ಛೇ! ನಿಮ್ಮ ಊಹೆ ತಪ್ಪು. ಊಹಿಸಿದಂತೆ ಒಂದೂ ಜೀವನದಲ್ಲಿ ನಡೆಯುವುದಿಲ್ಲವಾದ್ದರಿಂದ, ಮೊದಲೇ ಅವನಿಗೆ ಪ್ರಮುಖ ಪಾತ್ರ ಕೊಡುವುದು ಬೇಡ. ಸಿನಿಮಾಗಳಲ್ಲಿ ನೆಪ ಮಾತ್ರಕ್ಕೆ ಗೌರವ ಪಾತ್ರದಲ್ಲಿ ಕಾಣಿಸಿಕೊಳ್ಳುವ ಕೆಲ ನಾಯಕರಂತೆ ಅವನನ್ನು ಇಟ್ಟುಕೊಳ್ಳೋಣ. ಯುವಕನೆಂದ ಮೇಲೆ ಪರಿಚಿತ ವಲಯಗಳಲ್ಲಿ ಹೋಲುವಂತವನಾಗಿದ್ದರೆ ರಿಲೇಟ್ ಮಾಡಿಕೊಳ್ಳಲು ಅನುಕೂಲ. ಆದ್ದರಿಂದ, ಇಂದಿನ ಯುವಕರೆಲ್ಲಾ ಸಾಫ್ಟ್‌ವೇರ್‌ಗಳಾದ್ದರಿಂದ, ಅವನನ್ನೂ ಮುಲಾಜಿಲ್ಲದೇ ಸಾಫ್ಟ್‌ವೇರ್ ಮಾಡಿಬಿಡೋಣ.